ಸಾಕ್ಷಿಯನ್ನು ದಿನಾಂಕ 25-02-2022 ರಂದು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃಃ 2 ನೇ ಪ್ರತಿವಾದಿ ಪರ ಶ್ರೀ ಎಂ.ಆರ್.ವಿ ವಕೀಲರಿಂದಃಃ**

7. ರೆಂಕೊ ಸೊಸೈಟಿರವರು ಸರ್ವೆ ನಂ. 42/3 ಎ, 3 ಬಿ ಮತ್ತು 41/5 ರ ಪ್ರದೇಶಕ್ಕೆ 4 ನೇ ಪ್ರತಿವಾದಿ ಬಡಾವಣೆ ನಕ್ಷೆಯನ್ನು ಅನುಮೋದನೆ ಮಾಡಿಲ್ಲ ಎಂದು ಪತ್ರ ಕೊಟ್ಟಿರುತ್ತಾರೆ ಎಂದು ತೋರಿಸಲಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ದಾವಾಆಸ್ತಿಯ ಅನುಬೋಗದಲ್ಲಿ ಇರುವುದಿಲ್ಲ ಎಂದರೆ ಸುಳ್ಳು. ನಮ್ಮ ನಿವೇಶನ ಸರ್ವೆ ನಂ.42 ರಲ್ಲಿ ಬರುತ್ತದೆ ಮತ್ತು ಸರ್ವೆ ನಂ.42/3 ಬಿ ರಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-25 ಛಾಯಾಚಿತ್ರದಲ್ಲಿ 2 ನೇ ಪ್ರತಿವಾದಿಯ ಹೆಸರು ಮತ್ತು ಸರ್ವೆ ನಂಬರನ್ನು ಗೋಡೆಯ ಮೇಲೆ ನಮೂದಿಸಲಾಗಿದೆ ಎಂದರೆ ಸರಿ ಸಾಕ್ಷಿಯು ತಪ್ಪಾಗಿ ಬರೆದಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ಸ್ವತ್ತು ಸರ್ವೆ ನಂ.42 ರಲ್ಲಿ ಇದೆ ಎಂದರೆ ಸರಿಯಲ್ಲ. ಅದರಂತೆ ಸರ್ವೆ ನಂ. 42/3 ಬಿ ಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

8. ನಿಪಿ-24 ಆದೇಶದ ವಿರುದ್ಧ ಅಪೀಲು ಪೆಂಡಿಂಗ್ ಇದೆ ಎಂದರೆ ಗೊತ್ತಿಲ್ಲ. ಪ್ರಭಾಕರ ಮತ್ತು ವೆಂಕಟರಾಮ ಗೊತ್ತಿರುತ್ತಾರೆ. ಅವರು ಕೂಡಾ ಸೊಸೈಟಿಯಿಂದ ನಿವೇಶನಗಳನ್ನು ಪಡೆದಿರುತ್ತಾರೆ ಎಂದರೆ ಸರಿ. ಅವರು ಸೊಸೈಟಿ ವಿರುದ್ಧ ರಿಟ್ ಪೆಟಿಷನ್ ಹಾಕಿದ್ದರು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಜಮೀನನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.42/3 ಬಿ ಆಸ್ತಿಯನ್ನು ಸರ್ವೆ ಮಾಡಿಸಲು ನಿಮ್ಮದೇನಾದರೂ ತಕರಾರು ಇದೆಯಾ ಎಂದು ಪ್ರಶ್ನಿಸಲಾಗಿ

ತಕರಾರು ಇಲ್ಲ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಆಸ್ತಿಯು ಸರ್ವೆ ನಂ.42/3 ಬಿ ಇದ್ದುದರಿಂದ ಅದರಲ್ಲಿ ನನಗೆ ಯಾವುದೇ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿನಾಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಈಗ ನನ್ನ ವಾದಪತ್ರ ನೋಡುತ್ತಿದ್ದು ಪ್ಯಾರ-6 ರಲ್ಲಿ ಓ.ಎಸ್ 1636/2005 ನೇದರಲ್ಲಿ ಸೊಸೈಟಿ ಪರವಾಗಿ ಡಿಕ್ರಿ ಆಗಿದೆ ಎಂದು ಹೇಳಿರುತ್ತೇನೆ ಸದರಿ ದಾವೆಗೂ ಈ ಕೇಸಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಸರ್ವೆ ನಂ.42 ರಲ್ಲಿ ಇದೆ ಮತ್ತು ಸರ್ವೆ ನಂ.42/3 ಬಿ ರಲ್ಲಿ ಬರುವುದಿಲ್ಲ ಎಂದು ಆದೇಶ ಮಾಡಿದರೆ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಏನು ಗೊತ್ತಿಲ್ಲದಿದರೂ ಕೂಡಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .